Date : 12.06.2026

**ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**– ಮುಂದುವರಿದ ಮುಖ್ಯ ವಿಚಾರಣೆ – ಅರ್ಜಿದಾರರ ಪರ ಶ್ರೀ ಬಿ.ಎನ್.ಟಿ. ವಕೀಲರ ಪರ ಶ್ರೀ ಎ.ಒ. ವಕೀಲರಿಂದ –**

ನಾನು ಈ ಕೇಸಿನಲ್ಲಿ ಅರ್ಜಿದಾರನಿದ್ದು, ನನ್ನ ಮುಖ್ಯವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸರಿ ಇರುತ್ತವೆ.

ನನ್ನ ಸಾಕ್ಷಿಗೆ ಬೆಂಬಲಿತವಾಗಿ, ಅರ್ಜಿಯಲ್ಲಿ ಕಾಣಿಸಿದ ಆಸ್ತಿಯ ಬಗ್ಗೆ ಇರುವ ಒಂದು ಪಹಣಿ ಪ್ರತಿ ಮತ್ತು ದಿಃ 21.06.2021 ರ ದಿನಾಂಕದ ಒಂದು ಅವಾರ್ಡ ನೋಟೀಸ್ ಮತ್ತು ದಿಃ 26.01.2022 ರ ದಿನಾಂಕದ ಒಂದು ಹಿಂಬರಹ ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ–1 ರಿಂದ 3 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗಾಗಿ ವಕೀಲರು ಕಾಲಾವಕಾಶ ಕೋರುತ್ತಿದ್ದು, ಕಾಲಾವಕಾಶವನ್ನು ನೀಡಿ ಮುಂದುವರಿದ ಮುಖ್ಯವಿಚಾರಣೆ ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ)
ಓದಿ ಹೇಳಿ ಕೇಳಿ ಸರಿ ಇದೆ.

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.

Date : 26.02.2026

**ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**– ಮುಂದುವರಿದ ಮುಖ್ಯ ವಿಚಾರಣೆ – ಅರ್ಜಿದಾರರ ಪರ ಶ್ರೀ ಆರ್.ಎಲ್.ಪಿ. ವಕೀಲರಿಂದ –**

ದಿಃ 05.01.2022 ರ ದಿನಾಂಕದ ಅವಾರ್ಡ ನೋಟೀಸನ್ನು 2 ನೇ ಎದುರುದಾರರು ನನಗೆ ಕಳುಹಿಸಿದ್ದು, ಅದನ್ನು ಹಾಜರುಪಡಿಸಿದ್ದು, ಅದನ್ನು ನಿಪಿ–7 ಎಂದು ಗುರುತಿಸಲಾಯಿತು.

ಮೇಲಿನ ನನ್ನ ಸಾಕ್ಷಿಯನ್ನು ಪರಿಗಣಿಸಿ ಅರ್ಜಿಯಲ್ಲಿ ಕೋರಿದಂತೆ ಎದುರುದಾರರ ವಿರುದ್ಧ ಆದೇಶ ಮಾಡಲು ಕೋರುತ್ತೇನೆ.

**– ಪಾಟೀ ಸವಾಲು –2 ನೇ ಎದುರುದಾರ ಪರ ಶ್ರೀ ಡಿ.ಜಿ.ಪಿ. ವಕೀಲರಿಂದ –**

ನನ್ನ ವಾಸಸ್ಥಳವಾದ ಮರಡೀಹಳ್ಳಿ ಗ್ರಾಮವು ಚಿತ್ರದುರ್ಗ ಪಟ್ಟಣದಿಂದ 10 ದೂರದಲ್ಲಿ ಇರುವುದು ಎಂದರೆ ಸರಿ. ಮುಖ್ಯವಿಚಾರಣೆಯ ಕಂಡಿಕೆ–2 ರಲ್ಲಿ ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಇರುವ ಜಿಲ್ಲಾಧಿಕಾರಿಗಳ ಆದೇಶದ ಪ್ರತಿ ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲವೆಂದರೆ ಸರಿ. ಸಾಕ್ಷಿ ಸ್ವತಃ ಹೇಳುವುದೇನೆಂದರೆ, ಅದು ನನ್ನ ಬಳಿಯೇ ಇದ್ದು, ಅದನ್ನು ಹಾಜರುಪಡಿಸುವೆನೆಂದು ಹೇಳುತ್ತಾರೆ. ನಿಪಿ–7 ಎಂದು ಗುರುತಿಸಿದ ಅವಾರ್ಡ ನೋಟೀಸಿನಲ್ಲಿ ಕಾಣುವಂತೆ ತುಮಕೂರು –ಚಿತ್ರದುರ್ಗ–ದಾವಣಗೆರೆ ಹೊಸ ರೈಲ್ವೇ ಮಾರ್ಗ ಯೋಜನೆಗೆ ಸಂಬಂಧಿಸಿದಂತೆ ಕಲಂ–11 ರ ನೋಟೀಸನ್ನು ದಿಃ 22.11.2018 ರಂದು ಹೊರಡಿಸಿದ್ದು, ಅದಕ್ಕೂ ಮೊದಲು ಅರ್ಜಿಯಲ್ಲಿ ಕಾಣಿಸಿದ ಜಮೀನು ಭೂಪರಿವರ್ತನೆ ಆಗಿತ್ತು ಎಂದರೆ ಸರಿ. ಅರ್ಜಿಯಲ್ಲಿ ಕಾಣಿಸಿದ ಜಮೀನಿನ ಬಗ್ಗೆ 2 ನೇ ಎದುರುದಾರರು ನನಗೆ ಪರಿಹಾರ ನೀಡಿದ್ದು, ಆ ಪರಿಹಾರದ ಹಣವನ್ನು ನಿರ್ಧರಿಸುವಾಗ ಭೂ ಪರಿವರ್ತನೆಯಾದ ಜಮೀನಿಗೆ ಸಂಬಂಧಿಸಿದಂತೆ ಪರಿಹಾರ ನಿರ್ಧರಿಸಿ ಕೊಟ್ಟಿರುವರೆಂದು ಸೂಚಿಸಲಾಗಿ, ಪರಿಹಾರ ಕೊಟ್ಟಿರುತ್ತಾರೆ, ಆದರೆ ಸೂಕ್ತ ಆಸ್ತಿಯ ಮಾರುಕಟ್ಟೆ ಮೌಲ್ಯವನ್ನು ಅವರು ನಿರ್ಧರಿಸಿಲ್ಲವೆಂದು ಸಾಕ್ಷಿ ಹೇಳುತ್ತಾರೆ. ಸದರಿ ಆಸ್ತಿಯನ್ನು ಸ್ವಾಧೀನಪಡಿಸಿಕೊಂಡಾಗ ಆ ಆಸ್ತಿಯ ಮಾರುಕಟ್ಟೆ ಮೌಲ್ಯ ಎಷ್ಟಿತ್ತು ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ದಾಖಲೆ ಹಾಕಿಲ್ಲವೆಂದರೆ ಸರಿ.

2) ಕಲಂ–11 ರ ನೋಟೀಸನ್ನು ಹೊರಡಿಸುವ ಮೊದಲು ಅರ್ಜಿಯಲ್ಲಿ ಕಾಣಿಸಿದ ಆಸ್ತಿ ಬರುವ ಬುರುಜಿನರೊಪ್ಪ ಗ್ರಾಮದ ಆಸ್ತಿಗಳ ಬಗ್ಗೆ ಆದ 3 ವರ್ಷದ ವ್ಯವಹಾರಗಳ ಮೌಲ್ಯವನ್ನು ಅಥವಾ ಸರ್ಕಾರ

ನಿಗಧಿಪಡಿಸಿದ ಬುರುಜಿನರೊಪ್ಪ ಗ್ರಾಮದ ಆಸ್ತಿಗಳ ಮೌಲ್ಯವನ್ನು ಪರಿಗಣಿಸಿ ಅದರಲ್ಲಿ ಯಾವುದು ಹೆಚ್ಚು ಇರುವುದೋ ಅದನ್ನು ನಿರ್ಧರಿಸಿ ಅದಕ್ಕೆ ಅನುಗುಣವಾಗಿ ಭೂಸ್ವಾಧೀನಪಡಿಸಿಕೊಂಡ ಜಮೀನಿಗೆ 2 ನೇ ಎದುರುದಾರರು ನನಗೆ ಪರಿಹಾರ ನೀಡಿರುವರು ಎಂದರೆ ಸರಿಯಲ್ಲ. ನಾನು 2 ನೇ ಎದುರುದಾರರಿಂದ ಅರ್ಜಿಯಲ್ಲಿ ಕಾಣಿಸಿದ ಸ್ವತ್ತಿಗೆ ಸಂಬಂಧಿಸಿದಂತೆ ಪರಿಹಾರ ಪಡೆಯುವಾಗ, ಆ ಬಗ್ಗೆ ಯಾವುದೇ ತಕರಾರು ಅರ್ಜಿಯನ್ನು 2 ನೇ ಎದುರುದಾರರಿಗೆ ಬರಹ ರೂಪದಲ್ಲಿ ನೀಡಿಲ್ಲ ಎಂದರೆ ಸರಿಯಲ್ಲ. 2 ನೇ ಎದುರುದಾರರಿಗೆ ನಾನು ಬರಹ ರೂಪದಲ್ಲಿ ತಕರಾರು ಅರ್ಜಿ ನೀಡಿರುವೆನೆಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆ ಹಾಕಿಲ್ಲವೆಂದರೆ ಸರಿ. ಅರ್ಜಿಯಲ್ಲಿ ಕಾಣಿಸಿದ ನನ್ನ ಮಾಲೀಕತ್ವದ ಸ್ವತ್ತಿನ ಬಗ್ಗೆ 2 ನೇ ಎದುರುದಾರರು ನನಗೆ ನೀಡಿದ ಪರಿಹಾರದ ಹಣವು ಸೂಕ್ತ ಇರುವುದು ಎಂದರೆ ಸರಿಯಲ್ಲ.

3) ಮುಖ್ಯವಿಚಾರಣೆಯ ಕಂಡಿಕೆ-4 ಮತ್ತು 5 ರಲ್ಲಿ ಕಾಣಿಸಿದ ಅಂಶಗಳ ಬಗ್ಗೆ ನಾನು ನ್ಯಾಯಾಲಯಕ್ಕೆ ದಾಖಲೆ ಹಾಕದೇ ಇದ್ದು, ಕಾರಣ ಆ ಅಂಶಗಳು ಸುಳ್ಳಿನಿಂದ ಕೂಡಿವೆ ಎಂದರೆ ಸರಿಯಲ್ಲ. ಮುಖ್ಯವಿಚಾರಣೆಯ ಕಂಡಿಕೆ-6 ರಲ್ಲಿ ಕಾಣಿಸಿದಂತೆ ಭೂಸ್ವಾಧೀನ ಪಡಿಸಿಕೊಂಡ ಸ್ವತ್ತಿನ ಮೌಲ್ಯ ಪ್ರತೀ ಚ.ಮೀ ಗೆ ರೂ.15,000/- ಕ್ಕೂ ಹೆಚ್ಚು ಇತ್ತೆಂದು ತೋರಿಸಲು ನಾನು ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿಲ್ಲವೆಂದರೆ ಸರಿ. ಮುಖ್ಯವಿಚಾರಣೆಯ ಕಂಡಿಕೆ-5 ರಲ್ಲಿ ನನ್ನ ಮಾಲೀಕತ್ವದ ಭೂಸ್ವಾಧೀನ ಪಡಿಸಿಕೊಂಡ ಸ್ವತ್ತಿಗೆ ಸಂಬಂಧಿಸಿದಂತೆ ಪರಿಹಾರ ನೀಡುವಾಗ ಶೇ.35 ರಷ್ಟು ಭಾಗವನ್ನು ಕಡಿತಗೊಳಿಸಿ ಶೇ. 65 ರಷ್ಟು ಮಾತ್ರ ಪರಿಹಾರವೆಂದು ನಿರ್ಧರಿಸಿ ನನಗೆ 2 ನೇ ಎದುರುದಾರರು ಹಣ ಪಾವತಿಸಿರುವರೆಂದು ನಾನು ಕಾಣಿಸಿರುವುದು ಸುಳ್ಳು ಎಂದರೆ ಸರಿಯಲ್ಲ. 2 ನೇ ಎದುರುದಾರರು ನನಗೆ ನೀಡಿದ ಪರಿಹಾರದ ಹಣವು ಕಾನೂನು ಬದ್ದ/ಕಾಯ್ದೆ ಯನ್ವಯೇ ನಿರ್ಧರಿಸಿ ಪರಿಹಾರದ ಹಣವನ್ನು ನನಗೆ ನೀಡಿರುವುದು ಸೂಕ್ತ ಇರುವುದು ಎಂದರೆ ಸರಿಯಲ್ಲ.

4) ನನ್ನ ಮಾಲೀಕತ್ವದ ಭೂಸ್ವಾಧೀನ ಪಡಿಸಿಕೊಂಡ ಸ್ವತ್ತಿಗೆ ಸಂಬಂಧಿಸಿದಂತೆ ಎದುರುದಾರರು ಈಗಾಗಲೇ ನನಗೆ ಸೂಕ್ತ ಪರಿಹಾರವನ್ನು ನೀಡಿದ್ದು, ಆದರೂ ಕೂಡ ನಾನು ಉದ್ದೇಶಪೂರ್ವಕವಾಗಿ ಸುಳ್ಳು ಅಂಶದ ಪ್ರಮಾಣ ಪತ್ರ ಸಲ್ಲಿಸಿ ಸಾಕ್ಷ್ಯ ಹೇಳುತ್ತಿರುವೆನೆಂದರೆ ಸರಿಯಲ್ಲ.

**– ಪಾಟೀ ಸವಾಲು – 1 ನೇ ಎದುರುದಾರ ಪರ ಶ್ರೀ ಕೆ.ಎಂ. ವಕೀಲರ ಪರ ಶ್ರೀ ಕೆ.ಪಿ.ಎಂ. ವಕೀಲರಿಂದ –**

ವಕೀಲರು ಹಾಜರಿದ್ದು, ಈ ಮೇಲೆ 2 ನೇ ಎದುರುದಾರರು ಮಾಡಿರುವ ಪಾಟೀ ಸವಾಲನ್ನು 1 ನೇ ಎದುರುದಾರರ ಪರ ಪಾಟೀ ಸವಾಲು ಎಂದು ಅಳವಡಿಸಿಕೊಳ್ಳುವುದಾಗಿ ಕೋರಿರುತ್ತಾರೆ.

ಮರು ವಿಚಾರಣೆ – ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ)

ಓದಿ ಹೇಳಿ ಕೇಳಿ ಸರಿ ಇದೆ.

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.